

# ಬಹುರೂಪಿ ವಿನಯಾ

ಭಾವನಾತ್ಮಕ ಪಾತ್ರಗಳ ಮೂಲಕ ವಿನಯಾ ಪ್ರಸಾದ್ ಕನ್ನಡ ಪ್ರೇಕ್ಷಕರಿಗೆ ಪರಿಚಿತರು. ಈ ಹಿರಿಯ ನಟಿ ಇದೀಗ ನಿರ್ದೇಶಕಿಯ ರೂಪದಲ್ಲಿ ಚಿತ್ರರಸಿಕರ ಎದುರು ಬರುತ್ತಿದ್ದಾರೆ. ಅವರ ನಿರ್ದೇಶನದ ಚೊಚ್ಚಿಲ ಸಿನಿಮಾ 'ಲಕ್ಷ್ಮೀನಾರಾಯಣರ ಪ್ರಪಂಚಾನೇ ಬೇರೆ' ದಸರೆಯ ವೇಳೆಗೆ ತೆರೆ ಕಾಣಲು ಸಿದ್ಧತೆ ನಡೆಸುತ್ತಿದೆ. ಈ ಮೂಲಕ ಕನ್ನಡದ ಬೆರಳೆಣಿಕೆ ಮಹಿಳಾ ನಿರ್ದೇಶಕರ ಪಟ್ಟಿಗೆ ಹೊಸತೊಂದು ಹೆಸರು ಸೇರ್ಪಡೆಯಾದಂತಾಗಿದೆ.

ವಿನಯಾ ಅವರ ಪುತ್ರಿ ಪ್ರಥಮಾ ಮೊದಲ ಬಾರಿಗೆ ಅಭಿನಯಿಸಿರುವುದು 'ಲಕ್ಷ್ಮೀನಾರಾಯಣರ ಪ್ರಪಂಚಾನೇ ಬೇರೆ' ಚಿತ್ರದ ವಿಶೇಷಗಳಲ್ಲೊಂದು. ಮಗಳ ಜೊತೆಗೆ ಅಮ್ಮನೂ ಬಣ್ಣಹಚ್ಚಿಕೊಂಡಿದ್ದಾರೆ. ಮಂಜುನಾಥ್ ಹೆಗಡೆ, ಋತು, ಶೈಲಜಾ ಜೋಶಿ, ದೀಪಕ್ ಕುಮಾರ್ ತಾರಾಗಣದಲ್ಲಿರುವ ಇತರರು.

ನಿರ್ದೇಶನ ಮಾತ್ರವಲ್ಲ, ನಿರ್ಮಾಣದ ಹೊಣೆಯನ್ನೂ ವಿನಯಾ ಹೊತ್ತುಕೊಂಡಿದ್ದಾರೆ. ಸಂಭಾಷಣೆ, ಕಥೆ ಹಾಗೂ ಚಿತ್ರಕಥೆಯ ಹೆಣಿಗೆ ಜ್ಯೋತಿಪ್ರಕಾಶ್ ಅತ್ರೆ ಅವರದು. ಇಂಗ್ಲಿಷ್‌ನಲ್ಲಿ ಅತ್ರೆ ಅವರು ಬರೆದ ಮಾತುಗಳನ್ನು ವಿನಯಾ ಕನ್ನಡಕ್ಕೆ ತಂದಿದ್ದಾರಂತೆ. ನಿರ್ಮಾಣದಲ್ಲೂ ಕೈಜೋಡಿಸಿರುವ ಅತ್ರೆ, ಸಂಗೀತ ಸಂಯೋಜನೆಯನ್ನೂ ಮಾಡಿದ್ದಾರೆ. ಜೆ.ಜಿ. ಕೃಷ್ಣ ಛಾಯಾಗ್ರಹಣ ಚಿತ್ರಕ್ಕಿದೆ.

■ ರಘು




ಪ್ರಸಿದ್ಧಿರವರಿಂದ ಈ ನವರಾತ್ರಿಯಲ್ಲಿ
ಲಕ್ಷಣವಾಗಿ ಕಾಣಿರಿ

A WOMEN'S WORLD
21st - 30th Sep. 2017

Introducing 9 Designs
from 9 Origins
at all our Stores

Silks, Cotton & Salwars
Prasiddhi SILKS
A renowned name for well known sarees

K.H. Road | M.G. Road | Bannerghatta Road
Commercial Street | Domlur | Marathahalli